ಸಂಪೂರ್ಣವಾಗಿ ಎರ್ರಾಡಿಕೇಟ್ ಮಾಡಲೇಬೇಕೆಂದು ತಿಳಿಸಿದ್ದೇನೆ. ಹುಳಿಯಾರು ಇಡೀ ಭಾರತದಲ್ಲಿ ಅತ್ಯಂತ ಹೆಚ್ಚಿಗೆ ಮಲೇರಿಯಾ ಇರತಕ್ಕ ಜಾಗ ಮತ್ತು ಪ್ರತಿವರ್ಷ ಇಲ್ಲಿ ಕಾಲರಾ ಕೂಡ ಬರುತ್ತಿರುತ್ತದೆ. ಆದ್ದರಿಂದ ಇಲ್ಲಿ ತಾವು ಕೂಡಲೇ ಸೂಕ್ತ ಕ್ರಮ ತೆಗೆದುಕೊಳ್ಳದಿದ್ದರೆ ಬಹಳ ತೊಂದರೆಯಾಗುತ್ತದೆ. ಇದರ ಜೊತೆಗೆ ನಾಳೆ ೨೨ನೇ ತಾರೀಖು ಚಿಕ್ಕನಾಯ್ಕನಹಳ್ಳಿಯಲ್ಲಿ ವಿಕಾವಶಿ ಜಾತ್ರೆ ಕೂಡ ಪ್ರಾರಂಭವಾಗುತ್ತಿದೆ. ಇದನ್ನು ಯಾವುದೇ ಕಾರಣದಿಂದಲೂ ನಿಲ್ಲಿಸುವುದಕ್ಕೆ ಸಾಧ್ಯವಾಗುವುದಿಲ್ಲ ಆದ್ದರಿಂದ ಅಲ್ಲೂ ಕೂಡ ಮುಂಜಾಗರೂಕತೆ ತೆಗೆದುಕೊಂಡು ಲಸಿಕೆಯನ್ನು ಹಾಕತಕ್ಕ ಕಾರ್ಯವನ್ನು ಕೈಗೊಳ್ಳಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಎಂ. ವೀರಪ್ಪ ಮೊಯಿಲಿ.—ಅದರ ಬಗ್ಗೆ ಮುಂಜಾಗರೂಕತೆ ಕ್ರಮ ಕೈಗೊಳ್ಳುತ್ತೇವೆ. ಒಂದು ಸಾವಿರ ಮಂದಿ ಮಲೇರಿಯಾ ಪ್ರಕರಣಗಳಲ್ಲಿ ಆಸ್ಪತ್ರೆಗೆ ದಾಖಲಾಗಿದ್ದಾರೆಂದು ಪತ್ರಿಕೆಗಳಲ್ಲಿ ಏನು ವರದಿ ಬಂದಿದೆ ಅದು ಸರಿಯಲ್ಲವೆಂದು ಹೇಳಿದೆ. ಆ ವರದಿಯಲ್ಲಿ ಸತ್ಯಾಂಶ ಇಲ್ಲವೆಂದು ಮತ್ತೊಮ್ಮೆ ಸ್ಪಷ್ಟಪಡಿಸುತ್ತೇನೆ.

ಶ್ರೀ ಜೆ. ಸಿ. ಮಂಜುನಾಥಸ್ವಾಮಿ.—ಹುಳಿಯಾರದಲ್ಲಿ ರೆಕಾರ್ಡ್ ಇದೆ.

ಅಧ್ಯಕ್ಷರು.—ಮಂತ್ರಿಗಳು ನೋಟ್ ಮಾಡಿಕೊಂಡಿದ್ದಾರೆ, ಬಿಡಿ

ವರದಿಯನ್ನೊಪ್ಪಿಸಂವುದು

ಶ್ರೀಮತಿ ನಾಗಮ್ಮ ಸಿ. ಕೇಶವಮೂರ್ತಿ.—ಖಾಸಗೀ ಸದಸ್ಯರ ವಿಧೇಯಕ ಹಾಗೂ ನಿರ್ಣಯಗಳ ಸಮಿತಿಯ ಮೂರನೆಯ ವರದಿಯನ್ನು ಸಭೆಯ ಮುಂದೆ ಮಂಡಿಸುತ್ತೇನೆ.

ಶ್ರೀ ಬಾಬುಗೌಡ ಆರ್. ಪಾಟೀಲ್.—ಖಾಸಗೀ ಸದಸ್ಯರ ವಿಧೇಯಕ ಹಾಗೂ ನಿರ್ಣಯಗಳ ಸಮಿತಿಯ ಮೂರನೆಯ ವರದಿಯನ್ನು ಸಭೆಯು ಒಪ್ಪುವುದೆಂದು ಭಾವಿಸುತ್ತೇನೆ.

ಸಭೆಯು ಒಪ್ಪಿಗೆ ನೀಡಿತು

ಗಮನ ಸೆಳೆಯುವ ಸೂಚನೆಗಳು

೧ ಮೈಸೂರು ನಗರದಲ್ಲಿ ರಾಮ ಜನ್ಮಭೂಮಿಯ ಮೆರವಣಿಗೆಯ ಸಂದರ್ಭದಲ್ಲಿ ಪ್ರಮುಖರ ಮೇಲೆ ಪೋಲೀಸರಿಂದ ಹಲ್ಲೆ

ಶ್ರೀ ಬಿ.ಎಸ್. ಯಡಿಯೂರಪ್ಪ (ಶಿಕಾರಿಪುರ)—ಮಾನ್ಯ ಅಧ್ಯಕ್ಷರೇ ತಾರೀಖು ೨೨-೬-೧೯೯೦ರಂದು ಮೈಸೂರು ನಗರದಲ್ಲಿ ಶ್ರೀರಾಮ ಜನ್ಮಭೂಮಿಯ ಕುರಿತಾಗಿ ಮೆರವಣಿಗೆ ಹೊರಟಾಗ ಪೋಲೀಸರು ಕೆಲವು ಪ್ರಮುಖರ ಮೇಲೆ ಹಲ್ಲೆ, ನಡೆಸಿ ಗುಲ್ಬರ್ಗ ಜೈಲಿಗೆ ಕಳುಹಿಸಿದ್ದರ ಬಗ್ಗೆ ಮಾನ್ಯ ಮುಖ್ಯ ಮಂತ್ರಿಗಳ ಗಮನವನ್ನು ಸೆಳೆಯುತ್ತೇನೆ.

ಶ್ರೀ ವೀರೇಂದ್ರ ಪಾಟೀಲ್ (ಮುಖ್ಯ ಮಂತ್ರಿಗಳು).—ಮಾನ್ಯ ಅಧ್ಯಕ್ಷರೇ, ನಾನು ಈ ಹೇಳಿಕೆಯನ್ನು ನೀಡಬಯಸುತ್ತೇನೆ.

ರಾಮಜನ್ಮಭೂಮಿ-ಬಾಬರಿ ಮಸೀದಿ ಪ್ರಕರಣವನ್ನು ಬಗೆಹರಿಸಲು ಕೇಂದ್ರ ಸರ್ಕಾರವು ವಿಫಲವಾದುದರ ವಿರುದ್ಧ ವಿಶ್ವ ಹಿಂದೂಪರಿಷತ್ತಿನ ಕೇಂದ್ರೀಯ ಘಟಕವು ರೂಪಿಸಿದ ಎರಡನೆಯ ಮತ್ತು ಪ್ರಮುಖ ಹಂತ ಕಾರ್ಯಕ್ರಮದ ಅಂಗವಾಗಿ ಅಯೋಧ್ಯೆಯಲ್ಲಿ ರಾಮಮಂದಿರವನ್ನು ಕಟ್ಟುವುದಕ್ಕೆ ಸಂಬಂಧಿಸಿದಂತೆ ಮೈಸೂರಿನ ಸ್ಥಳೀಯ ಹಿಂದೂ ಪರಿಷತ್ತಿನ ಪದಾಧಿಕಾರಿಗಳು ೫೦ ಮಂದಿ ದಿನಾಂಕ ೨೨-೬-೧೯೯೦ರಂದು ಕೆ. ಆರ್. ವೃತ್ತದ ತಾತಯ್ಯ ಪ್ರತಿಮೆಯ ಹತ್ತಿರ ಕೂಳಿತು ಕೇಂದ್ರ ಸರ್ಕಾರದ ವಿರುದ್ಧ ಪ್ರತಿಭಟಿಸಿ ಮೆರವಣಿಗೆ ಹೊರಡಲು ಯೋಚಿಸಿದ್ದರು. ೧೯೯೦ರ ಮೇ ಜೂನ್ ತಿಂಗಳಿನಲ್ಲಿ ಮೈಸೂರಿನಲ್ಲಿ ಕೋಮು ಗಲಭೆ ನಡೆದಿದ್ದುದರಿಂದ ಪರಿಸ್ಥಿತಿ ಗಂಭೀರವಾಗಿದ್ದು ಸಾಮಾನ್ಯ ವಾತಾವರಣವನ್ನು ತರಲು ಪೋಲೀಸರು ಪ್ರಯತ್ನಿಸುತ್ತಿದ್ದರು ಈ ರೀತಿಯ ಮೆರವಣಿಗೆಯನ್ನು ತೆಗೆದುಕೊಂಡು ಹೋದಲ್ಲಿ ಅದು ಶಾಂತಿಭಂಗ ಉಂಟು ಮಾಡಬಹುದೆಂದು ಮೈಸೂರಿನ ಪೋಲೀಸ್ ಕಮೀಷನರು ಭಾವಿಸಿದರು. ಆದುದರಿಂದ ಖಾಸಗಿ ಸಾರ್ವಜನಿಕ ಆಸ್ತಿಪಾಸ್ತಿಗಳನ್ನು ಹಾಗೂ ಜನರನ್ನು ರಕ್ಷಿಸಲು ಅವರು ಕರ್ನಾಟಕ ಪೋಲೀಸ್ ಕಾಯಿದೆ ೫೫ನೇ ಸೆಕ್ಷನ್ ಪ್ರಕಾರ

ನಿಷೇಧಾಜ್ಞೆಯನ್ನು ಮುಂಜಾಗ್ರತಾ ಕ್ರಮವಾಗಿ ವಿಧಿಸಿದರು. ಸದರಿ ಪರಿಷತ್ತಿನ ಸದಸ್ಯರು ಈ ನಿಷೇಧಾಜ್ಞೆಯನ್ನು ಉಲ್ಲಂಘಿಸಿ, ಮೆರವಣಿಗೆಯನ್ನು ತೆಗೆದುಕೊಂಡು ಹೋಗಲು ಪ್ರಯತ್ನಿಸಿದ್ದರಿಂದ ಒಬ್ಬ ಮಹಿಳೆ ಸೇರಿದಂತೆ ಒಟ್ಟು ೪೨ ಜನರನ್ನು ಬಂಧಿಸಿ ಐ ಪಿ ಸಿಯ ಕಲಂ ೧೫೧ ಹಾಗೂ ಸಿಆರ್‌ಪಿಸಿಯ ೧೦೭ ರ ಸೆಕ್ಷನ್ ಪ್ರಕರಣ ದಾಖಲು ಮಾಡಿಕೊಂಡರು. ಆದರೆ ಸೆರೆಯಲ್ಲಿಟ್ಟಿದ್ದ ಮಹಿಳೆಯನ್ನು ಜಾಮೀನಿನ ಮೇಲೆ ಬಿಡುಗಡೆ ಮಾಡಲಾಯಿತು. ಬಾಕಿ ೪೧ ಆಪಾದಿತರನ್ನು ತಾಲ್ಲೂಕು ಮಾಜಿಸ್ಟ್ರೇಟರವರ ಮುಂದೆ ಹಾಜರುಪಡಿಸಿದಾಗ ಅವರು ಈ ಬಂಧಿಗಳನ್ನು ೧೫ ದಿನಗಳ ನ್ಯಾಯಾಂಗ ಬಂಧನಕ್ಕೊಳಪಡಿಸಿ ಗುಲ್ಬರ್ಗದ ಸೆರೆಮನೆಗೆ ಕಳಿಸಿದರು. ಕರ್ನಾಟಕ ವಿಶ್ವ ಹಿಂದೂಪರಿಷತ್ತಿನ ಗೌರವ ಕಾರ್ಯದರ್ಶಿಗಳಾದ ಶ್ರೀ ಎ. ಪಿ. ಸುರೇಶ್ ಅವರನ್ನು ಬಂಧಿಸಿ ವ್ಯಾನಿನಲ್ಲಿ ಒಳಗೆ ಹಾಕುತ್ತಿರುವಾಗ ಅವರಿಗೆ ಕೆಲವು ಸಣ್ಣಪುಟ್ಟ ಗಾಯಗಳಾಗಿದ್ದುದರಿಂದ ಅವರಿಗೆ ಮೈಸೂರಿನ ಕಾಮಾಕ್ಷಿ ಆಸ್ಪತ್ರೆಯಲ್ಲಿ ಚಿಕಿತ್ಸೆ ನೀಡಲಾಯಿತು.

ಬಂಧಿತರ ಪರವಾಗಿ ವಕೀಲರು ಸಲ್ಲಿಸಿದ ಅರ್ಜಿಯನ್ನು ಪರಿಗಣಿಸಿ ಈಗಾಗಲೇ ಬಂಧಿತರಾಗಿದ್ದ ೪೧ ಜನರನ್ನು ದಿನಾಂಕ ೨೪-೬-೧೯೯೦ ರಂದು ಗುಲ್ಬರ್ಗದ ಕೇಂದ್ರಿಯ ಸೆರೆಮನೆಯಿಂದ ಬಿಡುಗಡೆ ಮಾಡಲಾಗಿದೆ. ಬಂಧಿತರು ಗುಲ್ಬರ್ಗದಿಂದ ಪಾಪಸಾದಾಗ ಅವರಿಗೆ ಸಹಾನುಭೂತಿ ಉಳ್ಳವರು ಹಿಂಸಾಚಾರದಲ್ಲಿ ತೊಡಗಿ ಶಾಂತಿಭಂಗ ಉಂಟು ಮಾಡಬಹುದೆಂದು ಭಾವಿಸಿ ಮೈಸೂರಿನ ಪೋಲೀಸ್ ಕಮೀಷನರ್ ಅವರು ನಿಷೇಧಾಜ್ಞೆಯನ್ನು ದಿನಾಂಕ ೨೭-೬-೧೯೯೦ ರ ವರೆಗೆ ವಿಸ್ತರಿಸಿದರು. ಸ್ಥಳೀಯ ಹಿಂದೂ ಪರಿಷತ್ತಿನ ಸದಸ್ಯರು ಸದರಿ ಬಂಧನಗಳ ವಿರುದ್ಧ ಕರಪತ್ರಗಳನ್ನು ಮುದ್ರಿಸಿ ಪೋಲೀಸರನ್ನು ಖಂಡಿಸಿ ಸಾರ್ವಜನಿಕ ಬೆಂಬಲವನ್ನು ಪಡೆಯಲು ಯತ್ನಿಸಿದ್ದರಿಂದ ಮೈಸೂರಿನಲ್ಲಿ ಸಾರ್ವಜನಿಕ ಶಾಂತಿ ಮತ್ತು ಐತೀಯ ಸೌಹಾರ್ದತೆಯನ್ನು ಕಾಪಾಡಿಕೊಳ್ಳಲು ಈ ಕ್ರಮವನ್ನು ತೆಗೆದುಕೊಳ್ಳಲಾಯಿತು. ಈಗ ಪರಿಸ್ಥಿತಿ ಶಾಂತವಾಗಿದೆ.

† ಶ್ರೀ ಬಿ. ಎಸ್. ಯಡಿಯೂರಪ್ಪ.—ಸನ್ಮಾನ್ಯ ಉಪಾಧ್ಯಕ್ಷರೆ, ಸನ್ಮಾನ್ಯ ಮುಖ್ಯ ಮಂತ್ರಿಗಳು ಹೇಳಿದ ಹಾಗೆ, ವಿಶ್ವ ಹಿಂದೂ ಪರಿಷತ್‌ನ ಕಾರ್ಯಕರ್ತರು ಇಡೀ ದೇಶದಲ್ಲೆಲ್ಲಾ ರಾಮಜನ್ಮ ಭೂಮಿ ಸ್ಥಳವಾದ ಅಯೋಧ್ಯೆಯಲ್ಲಿ ದೇವಸ್ಥಾನವನ್ನು ಕಟ್ಟಬೇಕೆನ್ನುವ ವಿಚಾರದ ಬಗ್ಗೆ ಎರಡನೆಯ ಹಂತದ ಹೋರಾಟ ದೇಶಾದ್ಯಂತ ನಡೆಯುತ್ತಿದೆ, ಮೈಸೂರಿನಲ್ಲಿಯೂ ಸಹ ೪-೫೦ ವಿಶ್ವಹಿಂದೂ ಪರಿಷತ್‌ನ ಜನ, ಇತರೆ ಹಿಂದೂ ಜನಾಂಗದ ಮುಖಂಡರುಗಳು ಸೇರಿಕೊಂಡು ಕೆ. ಆರ್. ಸರ್ಕಲ್‌ನ ಬಳಿ ಧರಣಿ ಸತ್ಯಾಗ್ರಹ ನಡೆಸಿದರು ಶಾಂತ ರೀತಿಯಲ್ಲಿ ಜನ ಜಾಗೃತಿಯನ್ನು ಮೂಡಿಸುವಂತಹ ಕಾರ್ಯಕ್ರಮಗಳನ್ನು ಅವರು ಏರ್ಪಡಿಸಿದರು. ಇದಕ್ಕೆ ಪೋಲೀಸ್‌ನವರ ಅನುಮತಿಯನ್ನು ಪಡೆದಿದ್ದಾರೆ. ಧ್ವನಿವರ್ಧಕವನ್ನು ಹಾಕಿಕೊಳ್ಳುವುದಕ್ಕೆ ಅವಕಾಶವನ್ನು ಕೊಟ್ಟಿರುತ್ತಾರೆ. ಕಾರ್ಯಕ್ರಮ ನಡೆಯುತ್ತಿದೆ. ನಾನು ಸನ್ಮಾನ್ಯ ಮುಖ್ಯ ಮಂತ್ರಿಗಳನ್ನು ಕೇಳುವುದಕ್ಕೆ ಇಷ್ಟಪಡುತ್ತೇನೆ. ಈ ರೀತಿ ಶಾಂತ ರೀತಿಯಲ್ಲಿ ಒಂದು ಕಾರ್ಯಕ್ರಮವನ್ನು ಏರ್ಪಡಿಸಿ, ಹಿಂದೂಗಳು ತಮ್ಮ ಹಕ್ಕನ್ನು ಉಳಿಸಿಕೊಳ್ಳುವುದಕ್ಕೋಸ್ಕರ ಅವರ ಭಾವನೆಯನ್ನು ವ್ಯಕ್ತಮಾಡಿಕೊಳ್ಳುವುದಕ್ಕೋಸ್ಕರ ಕಾರ್ಯಕ್ರಮದ ಸಭೆಯೊಂದನ್ನು ಮಾಡತಕ್ಕ ಸಂದರ್ಭದಲ್ಲಿ ಬೆಳಿಗ್ಗೆಯಿಂದ ಸಂಜೆ ೪ ಗಂಟೆಯವರೆಗೆ ಶಾಂತ ರೀತಿಯಲ್ಲಿ ಎಲ್ಲಾ ಕಾರ್ಯಕ್ರಮ ನಡೆಯುತ್ತಿದೆ. ನಾನೇ ಸ್ವತಃ ಇದರ ಸತ್ಯಾಸತ್ಯತೆಯನ್ನು ಕೊಳ್ಳುವುದಕ್ಕೋಸ್ಕರ ಮೈಸೂರಿಗೆ ಹೋಗಿದ್ದೆ. ಒಂದು ದಿವಸ ಪೂರ್ತಿ ಆಲ್ಲಿಯೇ ಇದ್ದು ಬಂದಿದ್ದೇನೆ. ಸಂಜೆ ೪ ಗಂಟೆಗೆ ಸತ್ಯಾಗ್ರಹ ಮುಗಿದ ಮೇಲೆ ಜಿಲ್ಲಾಧಿಕಾರಿಗಳಿಗೆ ಮನವಿಯನ್ನು ಸಲ್ಲಿಸುವುದಕ್ಕೆ ಮೆರವಣಿಗೆ ಹೋಗುವ ಕಾರ್ಯಕ್ರಮ ಒಂದು ಇತ್ತು, ನಾನು ಮಾನ್ಯ ಮುಖ್ಯಮಂತ್ರಿಗಳನ್ನು ವಿನಂತಿ ಮಾಡಿಕೊಳ್ಳುವುದೇನೆಂದರೆ ಈ ೩೫೦ನೇ ಸೆಕ್ಷನ್‌ನ್ನು ಜಾರಿ ಮಾಡುವಂತಹ ಸಂದರ್ಭ ಆಗ ಏನಿತ್ತು ? ಈ ರೀತಿ ಮನಸ್ಸು ಬಂದಾಗ, ಮನಸ್ಸು ಬಂದ ರೀತಿ ಈ ಸೆಕ್ಷನ್‌ನ್ನು ಜಾರಿ ಮಾಡುವಂತಹ ಆಶಾಂತಿ ವಾತಾವರಣದ ಪರಿಸ್ಥಿತಿ ಆ ಸಂದರ್ಭದಲ್ಲಿ ಏನಿತ್ತು ? ೪ ಗಂಟೆಗೆ ಪೊರಟ್ಟಂಥ ರಥವನ್ನು ಕೇವಲ ೫-೧೦ ನಿಮಿಷಗಳಲ್ಲಿ ಆ ರಥವನ್ನು ನಿಲ್ಲಿಸಿ, ಹಿಂದೆ ತಳ್ಳಿ, ಮಂಗಳಾರತಿ ತಟ್ಟೆ ಬಿಸಾಡಿ, ಅಲ್ಲಿರುವಂತಹ ಹಿಂದೂಗಳ ಮುಖಂಡರುಗಳನ್ನು ಬಂಧಿಸಿದರು. ಶ್ರೀರಾಮಚಂದ್ರ ಸಮಿತಿಯ ಅಧ್ಯಕ್ಷರಾದ ಡಾ. ಸಂಪತ್‌ಕುಮಾರ್ ಅವರು ವೈದ್ಯಕೀಯ ಕಾಲೇಜಿನ ಪ್ರಾಂಶುಪಾಲರು ಆದೇ ರೀತಿ ವಿಶ್ವನಾಥರಾವ್, ಬಿ. ಎ ಎಸ್. ನ ಪ್ರಮುಖರು. ನಮ್ಮ ಪಕ್ಷದ ಕಾರ್ಪೊರೇಟರ್ ಆದಂತಹ ಶ್ರೀ ನರಸಿಂಹ ಪ್ರಕಾಶ್‌ರಾಜ್ ಅರಸ್. ಅವರು ಹಾಗೂ ಕನ್ನಡ ಸಂಘದ ಮುಖಂಡರುಗಳಿದ್ದಾರೆ, ಈ ರೀತಿ ರಥವನ್ನು ತಡೆಯುವ ಸಂದರ್ಭ ಸುರೇಶ್ ಎಂಬ ವ್ಯಕ್ತಿ ಆತ ವಿಶ್ವ ಹಿಂದೂ ಪರಿಷತ್ತಿನ ಪ್ರಧಾನ ಕಾರ್ಯದರ್ಶಿ ಇವರುಗಳನ್ನು ಬಂಧಿಸುವ ಸಂದರ್ಭದಲ್ಲಿ ಪೋಲೀಸ್‌ನವರು ಆತನನ್ನು ಹೊಡೆದಂ, ಅವರ ಹೊಡೆತದಿಂದ ಆತನ ಕೈ ಮುರಿದುಕೊಂಡು ಆಸ್ಪತ್ರೆಯಲ್ಲಿದ್ದಾನೆ. ನಾನು

ತಮ್ಮಲ್ಲಿ ಕೇಳುವುದು ೨-೩ ವಿವರಗಳನ್ನು ಮಾತ್ರ, ಆವತ್ತು ಅವರನ್ನು ಬಂಧಿಸಿದ್ದು ಸಂಜೆ ೪-೩೦ ಗಂಟೆಯಲ್ಲಿ ರಾತ್ರಿ ೧೨ ಗಂಟೆಯ ನಂತರ ಅವರನ್ನು ತಹಸೀಲ್ದಾರ್‌ರವರ ಮುಂದೆ ಪ್ರಡ್ಯೂಸ್ ಮಾಡುವಂತಹ ಅಗತ್ಯ ಏನಿತ್ತು ? ಬಂಧಿಸುವಂತಹ ಸಂದರ್ಭದಲ್ಲಿ ಏತಕ್ಕೋಸ್ಕರ ಬಂಧಿಸುತ್ತಿದ್ದೀರಿ ಎಂದು ಕೇಳಿದಾಗ ಪ್ರಿವೆಂಟೀವ್ ಡಿಟೆನ್ಷನ್ ಆಕ್ಟ್ ಪ್ರಕಾರ ಬಂಧಿಸುತ್ತಿದ್ದೇವೆಂದು ಹೇಳಿ ಬಂಧಿಸಿದ್ದು, ಆ ಬಗ್ಗೆ ೧೫೧ ಸೆಕ್ಷನ್ ಪ್ರಕಾರ ಬಂಧಿಸಿದ್ದೇವೆಂದು ಆಜ್ಞೆ ಹೊರಡಿಸಿದ್ದಾರೆ, ೩೦-೪೦ ಜನರನ್ನು ಬಂಧಿಸುವ ಸಂದರ್ಭದಲ್ಲಿ ಆ ತಹಸೀಲ್ದಾರ್‌ರವರು ಮೈಸೂರಿನಲ್ಲಾಗಲಿ, ಮಂಡ್ಯದಲ್ಲಾಗಲೀ ಹತ್ತಿರ ಇದ್ದ ಯಾವುದಾದರೊಂದು ಜೈಲಿಗೆ ಕಳುಹಿಸುವುದಕ್ಕೆ ಅವಕಾಶ ಇರಲಿಲ್ಲವೆ ? ಈ ರೀತಿ ಮಾಡಬಾರದ ಯಾವ ಅಪರಾಧವನ್ನು ಅವರು ಮಾಡಿದ್ದಾರೆಂದು ತಹಸೀಲ್ದಾರ್‌ರವರು ಅವರನ್ನು ಮೈಸೂರಿನಿಂದ ಗುಲ್ಬರ್ಗ ಜೈಲಿಗೆ ೭೦೦ ಕಿಲೋಮೀಟರ್ ದೂರ ಕರೆದುಕೊಂಡು ಹೋಗುವ ಸಂದರ್ಭ ಏನಿತ್ತು? ತಹಸೀಲ್ದಾರ್ ರವರಿಗೆ ಈ ರೀತಿ ಗುಲ್ಬರ್ಗಕ್ಕೆ ಕಳುಹಿಸುವಂತಹ ಅಧಿಕಾರ ಇದೆಯೇ ? ಈ ೫೫೨ನೇ ಸೆಕ್ಷನನ್ನು ಆ ಸಂದರ್ಭದಲ್ಲಿ ಜಾರಿ ಮಾಡಿದ್ದು, ಉದ್ದೇಶಪೂರ್ವಕವಾಗಿ ಹಿಂದೂಗಳ ಭಾವನೆಯನ್ನು ಕೆರಳಿಸುವಂತಹ ಪ್ರಯತ್ನದ ರೀತಿಯಲ್ಲಿ ಪೋಲೀಸ್‌ನವರು ಮಾಡಿದ್ದಾರೆ. ತಹಸೀಲ್ದಾರ್‌ರವರ ಅಧಿಕಾರ ಕಾನೂನು ಬಾಹಿರವಾಗಿದೆ. ಇದರ ಬಗ್ಗೆ ಸನ್ಮಾನ್ಯ ಮುಖ್ಯಮಂತ್ರಿಗಳು ಉತ್ತರ ಕೊಡಬೇಕು.

ಶ್ರೀ ವೀರೇಂದ್ರಪಾಟೀಲ್.- ಇದೀಗ ನಾನು ಹೇಳಿಕೆ ನೀಡಿದ ಪ್ರಕಾರ ಈ ೫೦-೬೫ ಜನ ಏನು ಸೇರಿದ್ದರು ಆ ಪ್ರತಿಮೆಯ ಹತ್ತಿರ, ಅಲ್ಲಿ ಕಾಳಿತು ಪ್ರತಿಭಟನೆ ಮಾತ್ರ ಸಂಜೆ ೪ ಗಂಟೆಗೆ ಅವರವರ ಮನೆಗೆ ಹೋಗಿದ್ದಿದ್ದರೆ ಈ ಪರಿಸ್ಥಿತಿ ಉದ್ಭವವಾಗುತ್ತಿರಲಿಲ್ಲ ಅವರು ಅಲ್ಲಿ ಕುಳಿತಿದ್ದು ಅನಂತರ ೪ ಗಂಟೆಯ ನಂತರ ಜಿಲ್ಲಾಧಿಕಾರಿಗ ಹತ್ತಿರ ಮೆರವಣಿಗೆ ತೆಗೆದುಕೊಂಡು ಹೋಗುವುದಕ್ಕೆ ಪ್ರಯತ್ನ ಮಾಡಿದರು. ಇದು ಈ ಸಭೆಯ ಅನೇಕ ಮಾನ್ಯಸದಸ್ಯರಿಗೆ ಗೊತ್ತಿದೆ ಆ ಎಲ್ಲಾ ಗಲಭೆಗಳು ಮೆರವಣಿಗೆ ಹೊರಟಾಗಲೇ ಸಹಜವಾಗಿ ಆಗುತ್ತವೆ. ಆಲ್ಲಿ ಮೊನ್ನೆ ಮೊನ್ನೆ ಮೇ ತಿಂಗಳಲ್ಲಿ ಗಲಭೆಗಳಾಗಿದೆ. ಜೂನ್ ತಿಂಗಳಲ್ಲಿ ಗಲಭೆಯಾಗಿದೆ. ಮತ್ತು ಅವರು ಯಾವ ಮಾರ್ಗದಲ್ಲಿ ಹೋಗಬೇಕೆಂದಿದ್ದರೋ ಅಲ್ಲೇ ಗಲಭೆಯಾಗಿದೆ ಇಂಥ ಗಲಭೆಯಾದಾಗ ಅದೇ ಒಂದು ಸ್ಥಳದಿಂದ ಮತ್ತೆ ಮೆರವಣಿಗೆ ತೆಗೆದುಕೊಂಡು ಹೋಗಬೇಕೆಂದು ಇದ್ದರೆ ಮತ್ತೊಮ್ಮೆ ಗಲಭೆಯಾಗುತ್ತದೆ. ಮತ್ತೊಮ್ಮೆ ಗಲಭೆ ಯಾವಾಗ ನಿಮಗೆ ಮೊದಲೇ ಗೊತ್ತಿತ್ತಲ್ಲ ಗಲಭೆಯಾಗುತ್ತದೆಂದು. ಏಕೆ ಇದಕ್ಕೆ ಅವಕಾಶ ಮಾಡಿಕೊಟ್ಟಿದ್ದೀರಿ, ಎಂಬ ಟೀಕೆಗೆ ಗುರಿಯಾಗುತ್ತೀವೆ ಸುಮ್ಮನೆ ಕುಳಿತರೆ. ಅದಕ್ಕಾಗಿ ಕೋಮು ಗಲಭೆಯಾಗಬಾರದು. ಕೋಮು ಸೌಹಾರ್ದತೆ ಉಳಿಯಬೇಕು. ಮೊನ್ನೆ ಮೊನ್ನೆ ಆಲ್ಲಿ ಕೋಮು ಗಲಭೆಯಾಗಿದೆ ಎನ್ನುವ ದೃಷ್ಟಿಯಿಂದ ಅಲ್ಲಿರುವ ಅಧಿಕಾರಿಗಳು ತಮ್ಮ ಅಧಿಕಾರವನ್ನು ಉಪಯೋಗ ಮಾಡಿದ್ದಾರೆ. ಅದರಲ್ಲೂ ಕೋಮು ಸೌಹಾರ್ದ ಬೆಳೆಯುವ ದೃಷ್ಟಿಯಿಂದ ಉಪಯೋಗ ಮಾಡಿದ್ದಾರೆ. ಮಾನ್ಯ ಸದಸ್ಯರು ಹೇಳಿದ ಹಾಗೆ ಕೆಲವರನ್ನು ಹೊಡೆದರು ಇನ್ನಾರನ್ನೊ ಬಡಿದರು ಎನ್ನುವ ಪ್ರಶ್ನೆ ಇಲ್ಲ. ಎಲ್ಲರಿಗೂ ಕರೆದುಕೊಂಡು ಹೋಗುವುದಕ್ಕೆ ಮುಂಚೆ ತಾವಾಗಿಯೇ ಮುಂದೆ ಬರುತ್ತಾರೆ. ಕೆಲವರು ಅರೆಸ್ಟ್ ಮಾಡಿದಾಗ ವ್ಯಾನಿನಲ್ಲಿ ಕೊಡುವುದಕ್ಕೆ ತಯಾರಿರುವುದಿಲ್ಲ. ಅಂತಹ ಸಮಯದಲ್ಲಿ ಸ್ವಲ್ಪ ಮಟ್ಟಿಗೆ ಒತ್ತಾಯ ಮಾಡಿ ವ್ಯಾನಿನೊಳಗೆ ಕೂಡಿಸಬೇಕಾಗುತ್ತದೆ. ಆಗ ಸಣ್ಣ ಪುಟ್ಟ ಗಾಯಗಳಾಗಬಹುದು. ಅದೂ ಬದಲ ದೊಡ್ಡ ಗಾಯಗಳಾಗಿವೆ ಎಂದು ನನಗನ್ನಿಸುವುದಿಲ್ಲ. ಅದರಲ್ಲೂ ೪೧-೪೨ ಜನರನ್ನು ವ್ಯಾನಿನಲ್ಲಿ ಕೂಡಿಸುವಾಗ ಮುನ್ನ ಒಬ್ಬರಿಗೆ ಮಾತ್ರ ಯಾರಿಗಾದರೂ ಒಬ್ಬಬ್ಬರಿಗೆ ಗಾಯಗಳಾಗಬಹುದು. ಆಲ್ಲಿದ್ದ ಪೂಜೆ ಸಾವಗ್ರಿಗಳನ್ನು, ಮತ್ತೊಂದನ್ನು ಅಲ್ಲೆಲ್ಲ ಚೆಲ್ಲಿಬಿಟ್ಟಿದ್ದಾರೆ ಎನ್ನುವ ವಿಷಾತನ್ನು ಮಾನ್ಯ ಸದಸ್ಯರು ಏನು ಹೇಳಿದ್ದಾರೆ, ಇದರಲ್ಲಿ ಏನೂ ಅರ್ಥ ಇಲ್ಲ.

೧೮-೧೦ ಎ.ಎಂ.

ಆಲ್ಲಿ ಏನು ಸಾಮಗ್ರಿ ಇತ್ತೋ ಅದನ್ನು ಎಲ್ಲಾ ಪೋಲೀಸರು ಆಫೀಸಿಗೆ ತಲುಪಿಸಿದ್ದಾರೆ. ಅವನ್ನು ಎರಡನೇ ಕಡೆ ಹಾಕಿದ್ದಾರೆನ್ನುವುದು ಅಷ್ಟೊಂದು ಸರಿಯಲ್ಲವೆಂದು ಎನಿಸುತ್ತದೆ. ಕೋಮು ಸೌಹಾರ್ದದ ಸಲುವಾಗಿ ಏನು ಮಾಡಬೇಕಾಗುತ್ತದೆಯೋ ಆ ರೀತಿಯಲ್ಲಿ ಕ್ರಮ ತೆಗೆದುಕೊಂಡಿದ್ದಾರೆ. ಪೋಲೀಸರಾಗಲೀ, ತಹಸೀಲ್ದಾರರಾಗಲೀ ತಮ್ಮ ಅಧಿಕಾರ ಏನು ಉಪಯೋಗಿಸಬೇಕಾಗಿತ್ತೋ ಅದನ್ನು ಉಪಯೋಗಿಸಿದ್ದಾರೆನ್ನುವ ಮಾತನ್ನು ಈ ಸಂದರ್ಭದಲ್ಲಿ ಹೇಳುತ್ತೇನೆ.

ಶ್ರೀ ಬಿ. ಎಸ್. ಯಡಿಯೂರಪ್ಪ.- ಬಂಧಿತರನ್ನು ಕರೆದುಕೊಂಡು ಹೋಗುವುದಕ್ಕೆ ತಹಸೀಲ್ದಾರ್‌ರವರ ಮನೆಯ ಹತ್ತಿರ ೧೨ ಗಂಟೆಗೇ ಬಸ್ ಬಂದು ನಿಂತಿತ್ತು. ಇವರು ಹೋಗುವುದಕ್ಕಿಂತ ಮೊದಲೇ ಅದು ರೆಡಿಯಾಗಿ ನಿಂತಿತ್ತು. ಇವತ್ತು ಬಂಧಿತರನ್ನು ಮೈಸೂರು ಅಥವಾ ಮಂಡ್ಯ ಜಿಲ್ಲೆಯಲ್ಲಿ ಇರುವುದನ್ನು ಬಿಟ್ಟು ಗುಲ್ಬರ್ಗಾಕ್ಕೆ ಕಳುಹಿಸುವುದಕ್ಕೆ ತಹಸೀಲ್ದಾರ್‌ಗೆ ಏನು

ಅಧಿಕಾರ ಇದೆ? ಅದರ ಉದ್ದೇಶ ಏನು? ಹಿಂದೂಗಳ ಭಾವನೆಯನ್ನು ಹತ್ತಿಕ್ಕುವ ಭಾವನೆ ಇದಲ್ಲವೇ? ಕೋಮು ಗಲಭೆ ಆಗಬಹುದೆಂದು ಹೇಳಿದ್ದೀರಿ. ಇವತ್ತು ಅಲ್ಲಿ ಅಡ್ಡಿ ಮಾಡುವುದಕ್ಕೆ ಯಾರು ಬಂದರು? ಅಲ್ಲಿ ಶಾಂತಿ ವಾತಾವರಣ ಇತ್ತು. ಅಲ್ಲಿ ಬೇರೆ ಘಟನೆ ನಡೆದಿಲ್ಲ. ಹೀಗಿರಬೇಕಾದರೆ ಹಿಂದೂಗಳು ಅಲ್ಲಿ ಹೋಗಿ ಜಿಲ್ಲಾಧಿಕಾರಿಗಳಿಗೆ ಮನವಿಯನ್ನು ಕೊಡುವ ಅಧಿಕಾರವೇ ಇಲ್ಲವೇ? ಅದನ್ನು ನಿಮ್ಮ ಸರ್ಕಾರ ಕಿತ್ತುಕೊಂಡಿದೆಯೇ? ಇವತ್ತು ಅವರನ್ನು ಗುಲ್ಬರ್ಗಾ ಜೈಲಿಗೆ ಕಳುಹಿಸುವುದಕ್ಕೆ ಕಾರಣ ಏನು? ಇದರಿಂದ ಅಶಾಂತ ವಾತಾವರಣ ಉಂಟಾಗುವುದಿಲ್ಲವೇ? ನಿಮ್ಮ ಪ್ರಕಾರ ಮೆರವಣಿಗೆ ಮಾಡುವುದು, ಮನವಿ ಕೊಡುವುದು ಸರಿಯಲ್ಲ. ಆದರೆ 700 ಕಿ.ಮೀ. ದೂರದ ಗುಲ್ಬರ್ಗಾಕ್ಕೆ ಕಳುಹಿಸುವ ಅಗತ್ಯವೇನಿತ್ತು?

ಶ್ರೀ ವೀರೇಂದ್ರ ಪಾಟೀಲ್.—ಸ್ಥಳೀಯ ಅಧಿಕಾರಿಗಳು ಬಹುಶಃ ಎಲ್ಲಿ ಸ್ಥಳ ಇರುತ್ತದೆಯೋ ಅದನ್ನು ವಿಚಾರಿಸಿಕೊಂಡು ಮಾಡುತ್ತಾರೆ. ಇವತ್ತು ಎಲ್ಲಾ ಜನರನ್ನು ಒಂದೇ ಕಡೆ ಇಡಬೇಕಾಗುತ್ತದೆ. ಇದೂ ಒಂದು ಪ್ರಶ್ನೆ ಬರುತ್ತದೆ. ಎಷ್ಟು ಜನರಿಗೆ ಎಲ್ಲಿ ಅವಕಾಶ ಇದೆ ಎಂದು ನೋಡಿ ವಿಚಾರ ಮಾಡಿಕೊಂಡು ಈ ರೀತಿಯಲ್ಲಿ ವ್ಯವಸ್ಥೆ ಮಾಡಿದ್ದಾರೆ. ಒಂದು ವಿಚಾರದಲ್ಲಿ ಮಾನ್ಯ ಸದಸ್ಯರಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ. ಬಹುಶಃ ಎಲ್ಲೆಲ್ಲಿ ಕೋಮು ಗಲಭೆಗಳು ಆಗಿದೆಯೋ ಅವುಗಳ ಇತಿಹಾಸವನ್ನು ನೋಡಿದರೆ ಪ್ರೊಸೆಷನ್‌ನಲ್ಲೇ ಗಲಭೆ ಪ್ರಾರಂಭವಾಗುತ್ತದೆ. ಪ್ರೊಸೆಷನ್ ಒಬ್ಬರು ಹೊರಡುತ್ತಾರೆ. ಸ್ಲೋಗನ್ ಕೂಗಿ ಸಿಕ್ಕಾಪಟ್ಟೆ ಮಾತನಾಡಿಕೊಂಡು ಹೋಗುತ್ತಿದ್ದು ಯಾರ ಮೇಲೂ ಕಂಟ್ರೋಲ್ ಇರುವುದಿಲ್ಲ. ಇವತ್ತು ಅವರು ಏನಾದರೂ ಹೇಳಬಹುದು. ಯಾರೋ ಒಬ್ಬರು ಕಲ್ಲು ಹಾಕುತ್ತಾರೆ. ಆಗ ಶುರು ಆಗುತ್ತದೆ. ಈ ರೀತಿಯಲ್ಲಿ ಮೊನ್ನೆ ಮೊನ್ನೆ ಮೈಸೂರಿನಲ್ಲಿ ಆಗಿದೆ. ನನ್ನ ವಿನಂತಿ ಇಷ್ಟೇ. ಪ್ರತಿಮೆಯನ್ನು ಹತ್ತಿರ ಕುಳಿತು ಸಾಕಷ್ಟು ಪ್ರತಿಭಟನೆ ಮಾಡಿದಿರಿ. ಆ ನಂತರ ಒಬ್ಬರೋ ಇಬ್ಬರೋ ಹೋಗಿ ಮನವಿಯನ್ನು ಸಲ್ಲಿಸಬಹುದಾಗಿತ್ತು. ಅದಕ್ಕೆ ತಯಾರು ಇಲ್ಲ. ರಥ ಹೋಗಬೇಕು, ಪೂಜೆ ಸಾಮಗ್ರಿ ಹೋಗಬೇಕು. ದೊಡ್ಡ ದೊಡ್ಡ ಸ್ಲೋಗನ್ ಕೂಗುತ್ತಾ ಹೋಗುತ್ತಿದ್ದಾಗ ಯಾರೋ ಕಿಡಿಗೇಡಿಗಳು ಪಕ್ಕದಿಂದ ಕಲ್ಲು ಹೊಡೆದರೆ ತಕ್ಷಣ ಕೋಮು ಗಲಭೆ ಶುರುವಾಗುತ್ತದೆ. ಮೊನ್ನೆ ಮೊನ್ನೆ ಅಲ್ಲಿ ಕೋಮು ಗಲಭೆ ಆಗಿದೆ. ಆ ಗಾಯಗಳೇ ಇನ್ನೂ ಮಾಯಂವಾಗಿಲ್ಲ. ಮತ್ತೆ ಅದೇ ರೀತಿ ಗಲಭೆಯಾಗುತ್ತದೆಂದು ಮಾನ್ಯೆಚ್ಚರಿಕೆ ಕ್ರಮ ತೆಗೆದು ಕೊಳ್ಳುವುದರಲ್ಲಿ ಏನೂ ತಪ್ಪಿಲ್ಲ.

ಶ್ರೀ ಕೆ. ಈಶ್ವರಪ್ಪ.—ಮಾನ್ಯ ಮುಖ್ಯ ಮಂತ್ರಿಗಳ ಮಾತಿನಿಂದ ನನಗೆ ಒಂದು ಅರ್ಥವಾಗುತ್ತದೆ. ಸೀತ ಆಗುತ್ತದೆಂದು ಮೂಗನ್ನೇ ಕತ್ತರಿಸಬೇಕೆನ್ನುವ ಅಭಿಪ್ರಾಯ ಬಂದ ಹಾಗೆ ಕಾಣುತ್ತದೆ. ಮೆರವಣಿಗೆ ಹೋಗಬೇಕೆಂದು ನಮಗೆ ರಾಜ್ಯಾಂಗದ ಹಕ್ಕು ಇದೆ. ಯಾವುದೇ ದುಷ್ಟ ಶಕ್ತಿ ಅಡ್ಡ ಬರುತ್ತದೆಯೋ ಅದನ್ನು ನಿಗ್ರಹ ಮಾಡುವುದಕ್ಕೆ ಸರ್ಕಾರ ಇರುವುದು, ಅಧಿಕಾರಿಗಳು ಇರುವುದು. ಮೆರವಣಿಗೆಗೆ ಅವಕಾಶ ಕೊಡಿ ಎಂದರೆ ಯಾರೋ ಒಬ್ಬರಿಗೆ ಇಬ್ಬರಿಗೆ ಅವಕಾಶ ಕೊಡುತ್ತೇವೆಂದರ್ಥ ಅರ್ಥ ಇಲ್ಲ. ಶಿವಮೊಗ್ಗದಲ್ಲೂ ಸಹಾ ಸೆಕ್ಷನ್ಸ್ ಹಿಂಸನ್ನು ಹಾಕಿದ್ದು ಶ್ರೀರಾಮ ರಥ ಹೊರಡುವ ಸಂದರ್ಭದಲ್ಲಿ ಸಂಬಂಧಪಟ್ಟ ಅಧಿಕಾರಿಗಳನ್ನು ರಿಕ್ವೆಸ್ಟ್ ಮಾಡಿದಾಗ, ಸಂಬಂಧಪಟ್ಟ ಎಸ್‌ಪಿಯವರನ್ನು ಕೇಳಿಕೊಂಡಾಗ ಯಾರು ತೊಂದರೆ ಕೊಡುತ್ತಾರೆ ಅಂತಹವರನ್ನು ಅರೆಸ್ಟ್ ಮಾಡಿ ಮೆರವಣಿಗೆ ಸರಾಗವಾಗಿ ಹೋಗುವುದಕ್ಕೆ ಅವಕಾಶ ಮಾಡಿಕೊಟ್ಟರು. ವೈಭವದಿಂದ ಮೆರವಣಿಗೆ ಆಯಿತು. ಸಮಾರಂಭ ಆಯಿತು. ಬೇಲಿ ಮತದ ಸ್ವಾಮೀಜಿಗಳೂ ಬಂದಿದ್ದರು. ಆದರೆ ಮೈಸೂರಿನಲ್ಲಿ ಮೆರವಣಿಗೆಗೆ ಅವಕಾಶ ಕೊಡುವುದಿಲ್ಲವೆಂದರೆ, ನಮ್ಮ ಹಕ್ಕನ್ನು ಕಸಿಯುವ ಈ ಸರ್ಕಾರದ ಧೋರಣೆಯನ್ನು ನಾವು ಪ್ರಪಂಚಕ್ಕೆ ಖಂಡಿಸಬೇಕಾಗುತ್ತದೆ. ಮೆರವಣಿಗೆ ಸರಾಗವಾಗಿ ನಡೆಯುವುದಕ್ಕೆ ಅವಕಾಶ ಮಾಡಿ ಕೊಟ್ಟರು. ವೈಭವಯುತವಾಗಿ ಮೆರವಣಿಗೆಯಾಯಿತು. ಬೇಲಿಮತದ ಸ್ವಾಮೀಜಿಗಳೂ ಬಂದಿದ್ದರು, ಆದರೆ ಮೆರವಣಿಗೆಗೆ ಅವಕಾಶವನ್ನೇ ಕೊಡುವುದಿಲ್ಲವೆಂದು ನಮ್ಮ ಹಕ್ಕನ್ನೇ ಕಸಿದುಕೊಳ್ಳುವಂತಹ ಈ ಸರ್ಕಾರದ ಧೋರಣೆಯನ್ನು ನಾನು ಖಂಡಿಸುವುದಕ್ಕೆ ಇಷ್ಟಪಡುತ್ತೇನೆ. ಇನ್ನೊಂದು, ಧ್ವನಿ ವರ್ಧಕಕ್ಕೆ ಲೈಸನ್ಸ್ ಕೊಟ್ಟಿದ್ದಾರೆ. ಆದರೆ ಕಾರ್ಯಕ್ರಮ ನಡೆಯುತ್ತಿರುವ ಸಮಯದಲ್ಲೇ ಆದನ್ನು ಸೀಜ್ ಮಾಡುವುದಕ್ಕೆ ಯಾರು ಅವಕಾಶ ಕೊಟ್ಟರು? ಈ ರೀತಿ ಮಾಡಿ ನಮ್ಮ ಹಕ್ಕನ್ನೇ ಕಸಿದು ಕೊಂಡಿದ್ದಾರೆ. ಅಲ್ಲಿರತಕ್ಕಂತಹ ಶಾಮಿಯಾನವನ್ನು ಕಿತ್ತುಹಾಕಿದ್ದಾರೆ. ಬೇಕು ಎಂದೇ ಹಿಂದೂಗಳನ್ನು ಒಂದು ರೀತಿಯಲ್ಲಿ ನಿರ್ನಾಮ ಮಾಡುವುದಕ್ಕೆ ಈ ಸರ್ಕಾರ ಹೊರಟಿದೆಯೆಂದರೆ ಇದು ನನಗೆ ಅರ್ಥ ಆಗುವುದಿಲ್ಲ. ಇದಕ್ಕೆ ಮಾನ್ಯ ಮುಖ್ಯ ಮಂತ್ರಿಗಳು ಉತ್ತರ ಕೊಡಬೇಕು. ನಮ್ಮ ಭಾವನೆಗಳನ್ನು ನಾವು ಕೆರಳಿಸುವುದಕ್ಕೆ ಅವಕಾಶ ಮಾಡಿಕೊಡುವುದು ತಪ್ಪು, ಮೆರವಣಿಗೆ ಹೋಗುವುದು ತಪ್ಪು ಎಂಬುದಾ ಹೇಳಿದ್ದಾರೆ. ಇದೇ ರೀತಿಯ ವಾತಾವರಣ ಶಿವಮೊಗ್ಗದಲ್ಲಿತ್ತು. ಈ ವಾತಾವರಣದಲ್ಲಿ ಮೆರವಣಿಗೆ

ಹೋಗುವುದು ಸರಿಯಿಲ್ಲವೆಂದು ಜಿಲ್ಲಾಧಿಕಾರಿಗಳು ಹೇಳಿದರು. ಆದರೆ ನಾವು ಅವರ ಮನ ಒಲಿಸಿದ ಮೇಲೆ ಮೆರವಣಿಗೆಗೆ ಇದೇ ಅಧಿಕಾರಿಗಳು ಅವಕಾಶ ಮಾಡಿಕೊಟ್ಟರು. ಶಾಂತ ರೀತಿಯಲ್ಲಿ ಮೆರವಣಿಗೆ ಯಾಯಿತು. ಇದರಲ್ಲಿ ಯಾರು ತಪ್ಪು ಮಾಡುತ್ತಾರೋ ಅಂತಹವರನ್ನು ಅರೆಸ್ಟ್ ಮಾಡಿ ಎಂದು ನಾವೇ ಹೇಳಿದ್ದೇವೆ, ನಮ್ಮ ಭಾವನೆಗಳನ್ನು ಕೆರಳಿಸುವುದಕ್ಕೆ, ನಮ್ಮ ಹಕ್ಕನ್ನು ಕಿತ್ತುಕೊಳ್ಳುವುದಕ್ಕೆ ಪ್ರಯತ್ನ ಮಾಡಿದೆ ಈ ಸರ್ಕಾರ. ಇದಕ್ಕೆ ಮಾನ್ಯ ಮುಖ್ಯ ಮಂತ್ರಿಗಳು ಉತ್ತರ ಕೊಡಬೇಕು.

ಶ್ರೀ ವೀರೇಂದ್ರ ಪಾಟೀಲ್.—ಮೆರವಣಿಗೆ ತೆಗೆದುಕೊಂಡು ಹೋಗುವುದಕ್ಕೆ ಅವಕಾಶವನ್ನು ಸರ್ಕಾರ ಕೊಡುವ ಹಾಗೆ ಇಲ್ಲ ಎನ್ನುವ ಮಾತನ್ನು ನಾನು ಹೇಳಲೇ ಇಲ್ಲ. ಆದರೆ ಪರಿಸ್ಥಿತಿಯನ್ನು ನೋಡಿಕೊಂಡು ಸ್ಥಾನೀಕವಾಗಿ ಇರುವ ಪೋಲೀಸ್ ಅಧಿಕಾರಿಗಳು ನಿರ್ಣಯ ಮಾಡುತ್ತಾರೆ. ವಿಷಮ ಪರಿಸ್ಥಿತಿ ಇದ್ದಾಗ, ಬಹುಶಃ ಈ ತರಹದ ಮೆರವಣಿಗೆಯಿಂದ ಹೆಚ್ಚು ಅನಾಹುತಕ್ಕೆ ಅವಕಾಶವಾಗುತ್ತದೆ ಎನ್ನುವ ಭರವಸೆ ಅವರಿಗೆ ಬಂದಾಗ ಇಂತಹದ್ದನ್ನು ನಿಲ್ಲಿಸಬೇಕಾಗುತ್ತದೆ. ಆದಕ್ಕಾಗಿ ಶಿವಮೊಗ್ಗದಲ್ಲಿ ಇಂತಹ ಪರಿಸ್ಥಿತಿ ಇರಲಿಲ್ಲವೆಂದು ಕಾಣುತ್ತದೆ, ಆದರೆ ಇಲ್ಲಿ ಕೋಮು-ಗಲಭೆ ಮೇ ನಲ್ಲಿ ಆಗಿದೆ. ಜೂನ್‌ನಲ್ಲಿ ಕೋಮು ಗಲಭೆಯಾಗಿದೆ. ಇದೇ ಮನೆಯಲ್ಲಿ ಇದರ ಬಗ್ಗೆ ಬೇಕಾದಷ್ಟು ಚರ್ಚೆಯಾಗಿದೆ. ಇಂತಹ ಪರಿಸ್ಥಿತಿ ಇದ್ದಾಗ ಆ ಪ್ರದೇಶವನ್ನು ವಲನರಬಲ್ ಏರಿಯಾ ಎಂದು ಹೇಳುತ್ತೇವೆ. ಸ್ವಲ್ಪ ಎನಾದರೂ ಆಯಿತೆಂದರೆ ಒಂದೇ ಸಾರಿ ಭುಗ್ ಎಂದು ಕೋಮು ಗಲಭೆ ಶುರುವಾಗುತ್ತದೆ. ಮೈಸೂರು ನಗರವೂ ಕೂಡ ಅಂಥ ಒಂದು ಪ್ರದೇಶ. ಇಂತಹ ವಲನರಬಲ್ ಏರಿಯಾದ ಬಗ್ಗೆ ನಾವು ಬಹಳ ಜಾಗೃತರಾಗಿ ಇರಬೇಕಾಗುತ್ತದೆ. ಬಹಳ-ವಟ್ಟಿಗೆ ಮುಂಜಾಗ್ರತ ಕ್ರಮವನ್ನು ತೆಗೆದುಕೊಳ್ಳ ಬೇಕಾಗುತ್ತದೆ. ಏಕೆಂದರೆ ಯಾರದೋ ತಪ್ಪಿಗೆ ಇನ್ನೋಸೆಂಟ್ ಜನ ಬಲಿಯಾಗುತ್ತಾರೆ. ಅಂತಹವರೇ ಬಹಳಷ್ಟು ಜನ ಕಷ್ಟಕ್ಕೆ ಒಳಗಾಗುತ್ತಾರೆ ಎನ್ನುವ ದೃಷ್ಟಿಯಿಂದ ಅಲ್ಲಿಯ ವಾತಾವರಣ ಚೆನ್ನಾಗಿದ ರೂ ಸಹ ತಪ್ಪಿ ಹೋಗಬಹುದೆಂಬುದಾಗಿ ತಿಳಿದು ಅಧಿಕಾರಿಗಳು ಕ್ರಮ ತೆಗೆದುಕೊಂಡಿದ್ದಾರೆ. ಅಲ್ಲಿ ವಾತಾವರಣ ಕಲುಷಿತವಾಗದಿದ್ದರೂ ಹಿಂದೆ ಕೋಮು ಗಲಭೆಯಾಗಿದ್ದು ಅಂತಹ ಜಾಗದಲ್ಲಿ ಮೆರವಣಿಗೆ ತೆಗೆದುಕೊಂಡು ಹೋಗಬೇಕೆಂದಿರುವುದರಿಂದ ಪುನಃ ಮತ್ತೊಂದು ಗಲಭೆಯಾಗುವ ಅವಕಾಶ ಇದೆ ಎಂಬುದನ್ನು ಮನಗಂಡ ಪೋಲೀಸ್ ಅಧಿಕಾರಿಗಳು ಈ ಕ್ರಮ ತೆಗೆದುಕೊಂಡಿದ್ದಾರೆ. ಇದು ಯಾರ ಪರವಾಗಿ ಆಥವಾ ಯಾರವಿರುದ್ಧವಾಗಿಯೂ ಅಲ್ಲ. ಪೋಲೀಸ್‌ನವರ ಜವಾಬ್ದಾರಿ ಕಾನೂನು ಮತ್ತು ಶಾಂತಿ ಪಾಲನೆ ಮೇಂಟೈನ್ ಮಾಡುವುದು. ಅದಕ್ಕಾಗಿ ಅಲ್ಲಿ ಅದೇ ಗಲಭೆಯಾಗಬಾರದೆನ್ನುವ ದೃಷ್ಟಿ ಯಿಂದ ಕ್ರಮ ತೆಗೆದುಕೊಂಡಿದ್ದು ಸೂಕ್ತವಾಗಿದೆ.

ಶ್ರೀ ಎ. ರುಕ್ಮಯ್ಯ ಪೂಜಾರಿ.—ಮಾನ್ಯ ಉಪಾಧ್ಯಕ್ಷರೆ, ಶ್ರೀ ರಾಮ ಜನ್ಮ ಭೂಮಿ ಅಯೋಧ್ಯೆಯಲ್ಲಿ ದೇವಸ್ಥಾನ ಕಟ್ಟುವ ಬಗ್ಗೆ ಕೇಂದ್ರ ಸರ್ಕಾರದ ಮೇಲೆ ಒತ್ತಡ ತರುವುದಕ್ಕೆ ಪ್ರಯತ್ನ ಮಾಡಿದರು. ಅಂತಹದ್ದರಲ್ಲಿ ಪೋಲೀಸ್‌ನವರು ಈ ರೀತಿಯ ಕ್ರಮ ಏಕೆ ತೆಗೆದುಕೊಳ್ಳಬೇಕು? ಸತ್ಯಾಗ್ರಹ ಮಾಡುವಂತಹವರು ದರೋಡೆ, ಕೊಲೆ-ಸುಲಿಗೆ ಯಾರು ಮಾಡುತ್ತಾರೆ? ಸನ್ಮಾನ್ಯ ಮುಖ್ಯ ಮಂತ್ರಿಗಳು ತಮ್ಮ ಉತ್ತರದಲ್ಲಿ ಸಾರ್ವಜನಿಕರಲ್ಲಿ ಸೌಹಾರ್ದಯುತವಾದ ವಾತಾವರಣವನ್ನು ಕಾಪಾಡಲು ಈ ರೀತಿಯ ಕ್ರಮಗಳಿನ್ನು ಕೈಗೊಳ್ಳಲಾಗಿದೆಯೆಂದು ಹೇಳಿದ್ದಾರೆ ಬೆಳಿಗ್ಗೆಯಿಂದ ಸಂಜೆ 3-30 ಗಂಟೆಯವರಿಗೆ ಶಾಂತ ರೀತಿಯಲ್ಲಿ ಸತ್ಯಾಗ್ರಹ ನಡೆದಿದೆ. ಶಾಂತವಾದ ರೀತಿಯಲ್ಲಿಯೇ ಮೆರವಣಿಗೆಯ ಮೂಲಕ ಡಿ.ಸಿ.ಯವರಿಗೆ ಮನವಿಯನ್ನು ಕೊಡಬೇಕೆಂದಿರುವಾಗ, ಯಾರು ಸತ್ಯಾಗ್ರಹಿಗಳು ಇದ್ದಾರೋ ಅಂತಹವರನ್ನು ರಕ್ಷಣೆ ಮಾಡುವುದು ಪೋಲೀಸರದ್ದು ಹಾಗೂ ಸರ್ಕಾರದ ಕರ್ತವ್ಯ. ಆದನ್ನು ಬಿಟ್ಟು ಪೋಲೀಸ್‌ನವರು ಈ ರೀತಿ ಮಾಡಿರುವುದರಿಂದ ಹಿಂದೂ ಸಮಾಜ ಏನೆಂ ಇದೆ, ಅವರ ಮನಸ್ಸಿನ ಮೇಲೆ ಪ್ರಚೋದನೆ ಮಾಡಿದ ಹಾಗೆ ಆಗುತ್ತದೆ. ಆದ್ದರಿಂದ ಈ ಬಗ್ಗೆ ಮಾನ್ಯ ಮುಖ್ಯ ಮಂತ್ರಿಗಳು ವಿವರಣೆಯನ್ನು ನೀಡಬೇಕು.

ಶ್ರೀ ವೀರೇಂದ್ರ ಪಾಟೀಲ್.—ಮಾನ್ಯ ಸದಸ್ಯರೇ ಒಪ್ಪಿಕೊಳ್ಳುತ್ತಾರೆ. ಬೆಳಿಗ್ಗೆಯಿಂದ ಸಂಜೆ 4 ಗಂಟೆಯವರೆಗೂ ಸತ್ಯಾಗ್ರಹ ಮಾಡಿದರೂ ಯಾವ ತರಹದ ಆಕ್ಷೇಪವನ್ನು ಪೋಲೀಸ್‌ನವರು ಮಾಡಲಿಲ್ಲ ಎಂದು. ಹಸ್ತಕ್ಷೇಪ ಯಾವಾಗ ಮಾಡಿದರು ಅಂದರೆ ಅಲ್ಲಿ ಸತ್ಯಾಗ್ರಹ ಮುಗಿದ ಮೇಲೆ ರಥವನ್ನು ತೆಗೆದುಕೊಂಡು ಮೆರವಣಿಗೆ ಜೊತೆಗೆ ಜಿಲ್ಲಾಧಿಕಾರಿಗಳ ಹತ್ತಿರ ಹೋಗಬೇಕೆಂದಾಗ ಆದನ್ನು ನಿಲ್ಲಿಸಬೇಕಾಯಿತು. ಅದಕ್ಕೆ ಕಾರಣಗಳನ್ನು ಈಗಾಗಲೇ ಸಾಕಷ್ಟು ರೀತಿಯಲ್ಲಿ ವಿವರಿಸಿ ಹೇಳಿದ್ದೇನೆ. ಅಲ್ಪ ಸಂಖ್ಯಾತರ ಯಾವುದೇ ಮೆರವಣಿಗೆಯ ಮೇಲೆ ಇದುವರೆಗೆ ಗಲಾಟೆಯಾಗಿದೆಯೇ? ಹಿಂದೂಗಳು ಗಲಾಟೆ ಮಾಡಿದ್ದಾರೆಯೇ?

ಉಪಾಧ್ಯಕ್ಷರು.— ನಾನು ತಮಗೆ ಸಾಕಷ್ಟು ಅವಕಾಶ ಕೊಟ್ಟಿದ್ದೇನೆ. ಕಾಲಿಂಗ್ ಅಟೆನ್‌ಷನ್ ಮೇಲೆ ಎಷ್ಟು ಅವಕಾಶ ಕೊಡುವುದಕ್ಕೆ ಆಗುತ್ತದೆ ?

ಶ್ರೀ ಬಿ. ಎಸ್. ಯಡಿಯೂರಪ್ಪ.— ಇದನ್ನು ಉದ್ದೇಶ ಪೂರ್ವಕವಾಗಿ ಮಾಡಲಾಗಿದೆ. ಅಲ್ಲಿ ಸತ್ಯಾಗ್ರಹ ಮಾಡುತ್ತಿದ್ದವರು ಏನು ಅಪರಾಧ ಮಾಡಿದ್ದರು ? ಅವರನ್ನು ಗುಲ್ಬರ್ಗ ಜೈಲಿಗೆ ಹಾಕಿದ್ದೀರಿ. ರಾಜ್ಯದಲ್ಲಿ ಹಿಂದೂಗಳು ಪೂಜೆ ಪುನಸ್ಕಾರ ಮಾಡುವುದಕ್ಕೆ ಯಾರಿಗೂ ಅವಕಾಶ ಕೊಡುವುದಿಲ್ಲ, ಏಕೆಂದರೆ ಕೋಮು ಗಲಭೆಯಾಗುತ್ತದೆ ಆದಕ್ಕೋಸ್ಕರ ಮೆರವಣಿಗೆಯನ್ನು ರದ್ದು ಮಾಡಿದ್ದೇವೆಂದು ನಿಮ್ಮ ಸರ್ಕಾರ ಘೋಷಣೆ ಮಾಡಲಿ. ಆತರಹ ಘೋಷಣೆ ಮಾಡಿ ಹಿಂದೂಗಳ ಭಾವನೆಯನ್ನು ಕೆಣಕತಕ್ಕ ಧೈರ್ಯ ಮಾಡುವುದಕ್ಕೆ ನಿಮ್ಮಿಂದ ಸಾಧ್ಯವಿಲ್ಲ. ಇಡೀ ಹಿಂದೂಗಳ ಸಮುದಾಯಕ್ಕೆ ಈ ಸರ್ಕಾರ ಮಾಡಿರತಕ್ಕ ಅನ್ಯಾಯವಿದು. ಶಾಂತ ರೀತಿಯಲ್ಲಿ ಹೋಗಿ, ಮೆರವಣಿಗೆಯಲ್ಲಿ ಹೋಗಿ ತಮ್ಮ ಅಭಿಪ್ರಾಯವನ್ನು ವ್ಯಕ್ತಪಡಿಸಲು ಹೋಗುತ್ತಿದ್ದವರನ್ನು ಹತ್ತಿಕ್ಕುವ ನೀತಿ, ಹಿಂದೂ ವಿರೋಧಿ ನೀತಿಯನ್ನು ನಾನು ಈ ಮುಖ್ಯಮಂತ್ರಿಗಳಿಂದ ಇಚ್ಛೆ ಮಾಡಿರಲಿಲ್ಲ. ಅಲ್ಲಿ ಶಾಂತ ವಾತಾವರಣವಿತ್ತು. ಮೆರವಣಿಗೆ ಇಂತಹ ರಸ್ತೆಯಲ್ಲಿ ಹೋಗಬಾರದೆಂದು ಹೇಳಿದ್ದರೆ ಆ ರಸ್ತೆಯಲ್ಲಿ ಹೋಗುತ್ತಿರಲಿಲ್ಲ. ಪೋಲೀಸ್‌ನವರು ಬೇಡವೆಂದು ಹೇಳಿದ ರಸ್ತೆಯಲ್ಲಿ ಮೆರವಣಿಗೆ ಹೋಗಿಲ್ಲ. ಜಿಲ್ಲಾಧಿಕಾರಿಗಳ ಹತ್ತಿರ ಹೇಳಿಕೊಳ್ಳುವ ಹಕ್ಕು ಅವರಿಗೆ ಇದೆ.

ಉಪಾಧ್ಯಕ್ಷರು.— ತಾವು ಹೇಳಿದ್ದೂದು ರೆಕಾರ್ಡ್ ಆಗುವುದಿಲ್ಲ. ಈಗ ಮಾನ್ಯ ಕೆ. ಎಚ್. ಹನುಮೇಗೌಡರು ಮಾತನಾಡಿ. ಕಾಲಿಂಗ್ ಅಟೆನ್‌ಷನ್ ಮೇಲೆ ಮಾತನಾಡಲಿಕ್ಕೆ ಒಬ್ಬರಿಗೆ ಅವಕಾಶ ವಿದೆ. ತಮಗೆ ನಾನು ಅವಕಾಶ ಕೊಟ್ಟಿದ್ದೇನೆ.

ಶ್ರೀ ಜಿ.ಎಸ್. ಆಚಾರ್.—ಮಾನ್ಯ ಸದಸ್ಯರು ಕೋಮು ಗಲಭೆಗೆ ಪ್ರಚೋದನೆ ಮಾಡುತ್ತಿದ್ದಾರೆ

ಶ್ರೀ ಬಿ. ಎಸ್. ಯಡಿಯೂರಪ್ಪ.— ನಾನು ಅದಕ್ಕೋಸ್ಕರ ವ್ಯಾಪಕವಾಗಿ ಚರ್ಚೆ ಮಾಡಬೇಕೆಂದು ನಿಲುವಳಿ ಸೂಚನೆಯನ್ನು ಮೂವ್ ಮಾಡಿದ್ದೆ. ಅದನ್ನು ತಾವು ಕಾಲಿಂಗ್ ಅಟೆನ್‌ಷನ್‌ಗೆ ಕನ್ವರ್ಟ್ ಮಾಡಿದ್ದೀರಿ. ಹಿಂದೂ ವಿರೋಧಿ ನೀತಿ ಸರ್ಕಾರದ ನೀತಿಯೇನು ? ಮೈಸೂರಿನಲ್ಲಿ ಸತ್ಯಾಗ್ರಹ ಮಾಡುತ್ತಿದ್ದವರನ್ನು ಗುಲ್ಬರ್ಗ ಜೈಲಿಗೆ ಕಳುಹಿಸಿದ್ದೀರಿ. ಓಟಿನ ಆಸೆಗೋಸ್ಕರ ಹಿಂದೂಗಳಿಗೆ ಮೋಸ ಮಾಡುವಂಥದ್ದು ಸರ್ಕಾರದ ಕರ್ತವ್ಯವೇನು ? ಸರ್ಕಾರದ ಈ ನೀತಿಯನ್ನು ನಾವು ಪ್ರತಿಭಟನೆ ಮಾಡಬೇಕಾಗುತ್ತದೆ. ಹಿಂದೂಗಳನ್ನು ಕೆರಳಿಸುವಂತಹ ಕೆಲಸವನ್ನು ಸರ್ಕಾರದವರು ಮಾಡುತ್ತಿದ್ದಾರೆ. ಅಯೋಧ್ಯೆಯಲ್ಲಿ ಶ್ರೀರಾಮಚಂದ್ರ ದೇವಾಲಯವನ್ನು ಕಟ್ಟಬೇಕೆಂದು ಹೋರಾಟ ನಡೆಯುತ್ತಿರುವಾಗ ಅದನ್ನು ಹತ್ತಿಕ್ಕುವಂತಹ ಕೆಲಸ ಮಾಡುತ್ತಿದ್ದಾರೆ. ಇಂತಹ ಕೆಲಸ ದೇಶದ ಬೇರೆಲ್ಲೂ ಆಗಿಲ್ಲ.

(ಗೊಂದಲ)

ಶ್ರೀ ಎಂ. ವೀರಪ್ಪ ಮೊಯಿಲಿ.— ನಾನು ಕ್ರಿಯಾಲೋಪವನ್ನು ಎತ್ತುತ್ತೇನೆ.

ಉಪಾಧ್ಯಕ್ಷರು.—ಮಾನ್ಯ ಮಂತ್ರಿಗಳು ಕ್ರಿಯಾಲೋಪವನ್ನು ಎತ್ತಿದ್ದಾರೆ. ಮಾನ್ಯ ಸದಸ್ಯರು ಕುಳಿತುಕೊಳ್ಳಬೇಕು.

ಶ್ರೀ ಎಂ. ವೀರಪ್ಪ ಮೊಯಿಲಿ.— ಗಮನಸೆಳೆಯುವ ಸೂಚನೆಗೆ ಮಾನ್ಯ ಮುಖ್ಯ ಮಂತ್ರಿಗಳು ಉತ್ತರ ಕೊಟ್ಟಿದ್ದಾರೆ. ಅವರು ಉತ್ತರ ಕೊಟ್ಟ ಮೇಲೆ ಮತ್ತೆ ಪ್ರಶ್ನೆ ಕೇಳುತ್ತಿದ್ದಾರೆ. ತಾವು ಈಗಾಗಲೇ ಎರಡನೆಯ ಬಿಸಿನೆಸ್‌ಗೆ ಹೋಗಿದ್ದೀರಿ. ಇನ್ನೊಂದು ಗಮನಸೆಳೆಯುವ ಸೂಚನೆಯನ್ನು ಕರೆದಿದ್ದೀರಿ. ಅದೊಂದು ವಿಚಾರ. ಮೆರವಣಿಗೆಯ ಬಗ್ಗೆ ಸಮರ್ಪಕವಾದ ಉತ್ತರವನ್ನು ಕೊಟ್ಟಿದ್ದಾರೆ. ಮೆರವಣಿಗೆಯನ್ನು ಯಾರೂ ಕೂಡ ನಿಲ್ಲಿಸತಕ್ಕ ಪ್ರಯತ್ನ ಮಾಡುವುದಿಲ್ಲ. ಮೆರವಣಿಗೆ ಹೋಗುತ್ತಿದ್ದ ಪ್ರದೇಶದಲ್ಲಿ ಏನಾದರೂ ತೊಂದರೆಯಿದ್ದರೆ ಸ್ಥಳೀಯವಾಗಿರತಕ್ಕ ಅಧಿಕಾರಿಗಳು ಅದನ್ನು ನಿಲ್ಲಿಸಬೇಕು. ಆ ರೀತಿ ಏನಾದರೂ ನಿಲ್ಲಿಸಿರಬಹುದು. ಆದರೆ ಅದನ್ನೆ ವ್ಯಾಪಕವಾದಂತಹ ರೀತಿಯಲ್ಲಿ ಜಾತಿ ಅಥವಾ ಕೋಮು ಪ್ರಶ್ನೆಯನ್ನು ಎತ್ತಿ.....

ಶ್ರೀ ಬಿ ಎಸ್. ಯಡಿಯೂರಪ್ಪ.— ಶಾಂತ ರೀತಿಯಲ್ಲಿ ಸತ್ಯಾಗ್ರಹ ಮಾಡುತ್ತಿದ್ದವರನ್ನು ಗುಲ್ಬರ್ಗ ಜೈಲಿಗೆ ಕಳುಹಿಸಿದ್ದಾರೆ. ಅವರು ಎಲ್ಲಿ ಸತ್ಯಾಗ್ರಹ ಮಾಡಬೇಕು ? ಹಿಂದೂಗಳು ಪಾಕಿಸ್ತಾನಕ್ಕೆ ಹೋಗಿ ಸತ್ಯಾಗ್ರಹ ಮಾಡಬೇಕಾಗಿತ್ತೆ ? ಶ್ರೀರಾಮಚಂದ್ರ ದೇವಾಲಯವನ್ನು ಕಟ್ಟಲಿಕ್ಕೆ ಹಿಂದೂಗಳು ಪಾಕಿಸ್ತಾನಕ್ಕೆ ಹೋಗಿದ್ದಾರೆಯೆ ?

ಉಪಾಧ್ಯಕ್ಷರು.— ಮಾನ್ಯ ಯಡಿಯೂರಪ್ಪನವರು ಮಾತನಾಡುವುದು ಯಾವುದಂ ರೆಕಾರ್ಡ್ ಆಗುವುದಿಲ್ಲ. (ರೆಕಾರ್ಡ್ ಮಾಡಬೇಡಿಯೆಂದು ಅಧಿಕೃತ ವರದಿಗಾರರಿಗೆ ಸೂಚಿಸಿದರು)

(ಗೊಂದಲ)

ಉಪಾಧ್ಯಕ್ಷರಂ.— ಮಾನ್ಯ ಯಡಿಯೂರಪ್ಪನವರು ದಯವಿಟ್ಟು ಕುಳಿತುಕೊಳ್ಳಬೇಕಂ.

ಶ್ರೀ ಕೆ. ಹೆಚ್. ರಂಗನಾಥ್.— ಒಂದು ಕೋಮಿಗೂ ಇನ್ನೊಂದು ಕೋಮಿಗೂ ದ್ವೇಷ ಮನೋಭಾವನೆ ಬರುವ ರೀತಿಯಲ್ಲಿ ಏನು ಮಾತನಾಡಿದ್ದಾರೆ ಅದು ಕಡತದಲ್ಲಿ ಹೋಗಬಾರದು.

ಉಪಾಧ್ಯಕ್ಷರು.— ನಾನು ಈಗಾಗಲೇ ರೆಕಾರ್ಡ್ ಮಾಡಬೇಡಿಯೆಂದು. ಸೂಚಿಸಿದ್ದೇನೆ. ಅಂತಹದ್ದು ಯಾವುದೂ ರೆಕಾರ್ಡ್ ಆಗಿರುವುದಿಲ್ಲ.

ಶ್ರೀ ಬಿ. ಎಸ್. ಯಡಿಯೂರಪ್ಪ.— ಕಡತದಲ್ಲಿ ಹೋಗಲಾರದ ಮಾತನ್ನು ನಾನು ಯಾವುದೂ ಹೇಳಿಲ್ಲ. ನಿಮ್ಮ ತಹಶೀಲ್ದಾರ್‌ರವರು ಪೋಲೀಸ್‌ನವರ ಪ್ರಚೋದನೆಯಿಂದ ಸರ್ಕಾರದ ಪ್ರಚೋದನೆಯಿಂದ ಶಾಂತಿ ರೀತಿಯಲ್ಲಿ ಸತ್ಯಾಗ್ರಹ ಮಾಡುತ್ತಿದ್ದವರನ್ನು ಗುಲ್ಬರ್ಗ ಜೈಲಿಗೆ ಕಳುಹಿಸಿದ ಉದ್ದೇಶವೇನು ? ಮುಂದೆ ಅವರು ಹೋರಾಟ ಮಾಡಬಾರದೆನ್ನುವ ಉದ್ದೇಶ ನಿಮ್ಮದು ಇದೆಯೇನು ? ಹಿಂದೂಗಳ ಭಾವನೆಯನ್ನು ದಮನ ಮಾಡುವ ಉದ್ದೇಶ ನಿಮಗೆ ಇದೆಯೆ ?

ಉಪಾಧ್ಯಕ್ಷರು.— ರೆಕಾರ್ಡ್ ಮಾಡಬೇಡಿ.

ಉಪಾಧ್ಯಕ್ಷರು.— ದಯವಿಟ್ಟು ಎಲ್ಲರೂ ಕುಳಿತುಕೊಳ್ಳಿ.

ಶ್ರೀ ಬಿ.ಎಸ್. ಯಡಿಯೂರಪ್ಪ.— ದೇಶವನ್ನು ಛಿದ್ರ ಮಾಡಿದ್ದುದು ಯಾರು ಎಂಬುದು ಗೊತ್ತಾಗುತ್ತದೆ. ಬಿ.ಜೆ.ಪಿ. ಏನು ಎಂಬುದು ಇಡೀ ದೇಶಕ್ಕೇ ಗೊತ್ತಿದೆ...

(ಗೊಂದಲ)

ಉಪಾಧ್ಯಕ್ಷರು.— ಎಲ್ಲರೂ ಕುಳಿತುಕೊಳ್ಳಿ. ಶ್ರೀ ಯಡಿಯೂರಪ್ಪನವರೇ ನೀವು ಕುಳಿತುಕೊಳ್ಳಿ

(ಗೊಂದಲ)

ಶ್ರೀ ಬಿ.ಎಸ್. ಯಡಿಯೂರಪ್ಪ.— ಸರ್ಕಾರದ ನೀತಿಯನ್ನು ಪ್ರತಿಭಟಿಸಿ ನಾವು ವಾಕ್‌ಔಟ್ ಮಾಡುತ್ತಿದ್ದೇವೆ. ಇದೇ ರೀತಿಯ ನೀತಿಯನ್ನು ಸರ್ಕಾರ ಮುಂದುವರೆಸಿದರೆ ನಾವು ಅದನ್ನು ಸಹಿಸುವುದಿಲ್ಲ.

(ಗೊಂದಲ)

ಉಪಾಧ್ಯಕ್ಷರು.— ಶ್ರೀ ಹನುಮೇಗೌಡರೇ, ನೀವು ಸರ್ಕಾರದ ಗಮನ ಸೆಳೆಯಿರಿ.....

ಶ್ರೀ ಮಲ್ಲಾರಗೌಡ ಎಸ್ ಪಾಟೀಲ್.— ಮಾನ್ಯ ಉಪಾಧ್ಯಕ್ಷರೇ, ಮಾತನಾಡಲಿಕ್ಕೆ ಒಂದ ವಿಷಯ ಇರಬೇಕು. ಸದನದ ಬಗ್ಗೆ ಗೌರವ ಇರಬೇಕು. ಪದೆಪದೇ ಎದ್ದುನಿಂತು ಈ ರೀತಿ ಮಾತನಾಡುವುದಂ ಗೌರವ ಅಲ್ಲ. ವಾಕ್‌ಔಟ್ ಮಾಡುವುದಾದರೆ ಮಾಡಲಿ, ಪ್ರತಿಭಟನೆ ಬೇಕಾದರೆ ಮಾಡಲಿ .....

(ಗೊಂದಲ)

ಉಪಾಧ್ಯಕ್ಷರು.— ಹೀಗೆ ನಾಲ್ಕು-ನಾಲ್ಕು ಜನ ಎದ್ದುನಿಂತಂ ಮಾತನಾಡಿದರೆ ಹೇಗೆ ? ಶ್ರೀ ಯಡಿಯೂರಪ್ಪನವರೇ, ನಿಮ್ಮ ಗಮನ ಸೆಳೆಯುವ ಸೂಚನೆಗೆ ಸಾಕಷ್ಟು ಅವಕಾಶವನ್ನು ಕೊಟ್ಟಿದ್ದೇನೆ. ಈಗ ನೀವು ದಯವಿಟ್ಟು ಕುಳಿತುಕೊಳ್ಳಿ.

(ಗೊಂದಲ)

(ಈ ಸಂದರ್ಭದಲ್ಲಿ ಬಿ.ಜೆ.ಪಿ.ಯ ಸದಸ್ಯರು ಸಭಾತ್ಯಾಗ ಮಾಡಿದರು)

ಉಪಾಧ್ಯಕ್ಷರು.— ಶ್ರೀ ಹನುಮೇಗೌಡರೇ, ಮಂತ್ರಿಗಳ ಗಮನ ಸೆಳೆಯಿರಿ...